

# ಮತ್ತೆ ಮತ್ತೆ ವಿಷ್ಣು..

**ಪ್ರತಿ ವರ್ಷ ವಿಷ್ಣುವರ್ಧನ್ ಹುಟ್ಟುಹಬ್ಬದ ಸಂದರ್ಭದಲ್ಲಿ ಸ್ಮಾರಕದ ವಿಷಯ ಜೀವ ಪಡೆದುಕೊಳ್ಳುತ್ತದೆ. ವಿವಾದಾತ್ಮಕ ಸ್ಮಾರಕದ ಬಗ್ಗೆ ತಲೆ ಕೆಡಿಸಿಕೊಳ್ಳುವ ಬದಲು ವಿಷ್ಣು ಅವರನ್ನು ಮುಂದಿನ ಪೀಳಿಗೆಗೆ ದಾಟಿಸುವ ಅರ್ಥಪೂರ್ಣ ಕೆಲಸಗಳು ನಡೆಯಬೇಕು.**

■ ರಘು



ಸೆಪ್ಟೆಂಬರ್ 18 ವಿಷ್ಣುವರ್ಧನ್ ಜನ್ಮದಿನ. ಜನಮಾನಸದಲ್ಲಿ ನೆಲೆನಿಂತ ಕಲಾವಿದನೊಬ್ಬನ ಜನ್ಮದಿನ ಸಹಜವಾಗಿಯೇ ಸಂತಸವನ್ನುಂಟು ಮಾಡಬೇಕು. ಆದರೆ, ವಿಷ್ಣು ಜನ್ಮದಿನ ಸಂತಸದ ಜೊತೆಗೆ ವಿಷಾದವನ್ನೂ ಉಂಟುಮಾಡುತ್ತದೆ. ವಿಷ್ಣು ಅವರ ಸ್ಮಾರಕದ ವಿವಾದ ವಿಷಾದಕ್ಕೆ ಕಾರಣ.

ವಿಷ್ಣು ನಿಧನರಾಗಿ ಹತ್ತು ವರ್ಷವಾಗುತ್ತಾ ಬಂದರೂ ಅವರ ಸ್ಮಾರಕ ನಿರ್ಮಾಣದ ಬಗ್ಗೆ ಸ್ಪಷ್ಟ ನಿರ್ಧಾರವಾಗಿಲ್ಲ. 'ಆರು ಮುಖ್ಯಮಂತ್ರಿಗಳನ್ನು ಭೇಟಿ ಮಾಡಿದ್ದೇವೆ. ಆದರೆ ಯಾವ ಉಪಯೋಗವೂ ಆಗಿಲ್ಲ' ಎನ್ನುವುದು ವಿಷ್ಣು ಅವರ ಅಳಿಯ ಅನಿರುದ್ಧ ಅವರ ಅಳಲು. ಕಾಣದ ಕೈಗಳು ವಿಷ್ಣು ಸ್ಮಾರಕಕ್ಕೆ ಅಡ್ಡಿ ಮಾಡುತ್ತಿವೆ ಎನ್ನುವುದು ಅವರ ಆರೋಪ.

ಭಾರತಿ ವಿಷ್ಣುವರ್ಧನ್ ಅವರಿಗೂ ಸ್ಮಾರಕ ನನೆಗುದಿಗೆ ಬಿದ್ದಿರುವುದು ನೋವು ತಂದಿದೆ. ಇನ್ನೊಂದು ವರ್ಷದ ಅವಧಿಯಲ್ಲಿ ಸರ್ಕಾರದಿಂದ ಯಾವ ಕೆಲಸವೂ ಆಗದಿದ್ದಲ್ಲಿ ತಮ್ಮ ದಾರಿ ತಾವು ನೋಡಿಕೊಳ್ಳುವ ನಿರ್ಧಾರ ಅವರದು. ಸ್ಮಾರಕದ ಜೊತೆಗೆ ವಿಷ್ಣು ಅವರ ಹೆಸರನ್ನು ಕೆಲವರು ತಮ್ಮ ಸ್ವಾರ್ಥಕ್ಕೆ ಬಳಸಿಕೊಳ್ಳುತ್ತಿರುವ ಬಗ್ಗೆಯೂ ಅವರಿಗೆ ಬೇಸರವಿದೆ.

ತಮ್ಮ ನೆಚ್ಚಿನ ನಟನ ನೆನಪಿನಲ್ಲಿ ಅಭಿಮಾನಿಗಳು ಕಾರ್ಯಕ್ರಮಗಳನ್ನು ಆಯೋಜಿಸುವುದು ಇದ್ದದ್ದೇ. ಇಂಥ ಕಾರ್ಯಕ್ರಮಗಳನ್ನು ಆಕ್ಷೇಪಿಸುವುದರಲ್ಲಿ ಅರ್ಥವಿಲ್ಲ. ಆದರೆ, ನಿಜವಾದ ಸಮಸ್ಯೆ ಇರುವುದು ವಿಷ್ಣು ಹೆಸರನ್ನು ಸಿನಿಮಾಗಳಲ್ಲಿ ಅಪಬಳಕೆ ಮಾಡಿಕೊಳ್ಳುತ್ತಿರುವುದರ ಬಗ್ಗೆ. ಕಳ್ಳನ ಕಥೆಯ ಚಿತ್ರವೊಂದಕ್ಕೆ ಅವರ ಹೆಸರನ್ನು ಬಳಸಿಕೊಳ್ಳಲಾಯಿತು. ನಾಗಿಣಿಯ ಸೇಡಿನ ಕಥೆಯ ಚಿತ್ರದಲ್ಲಿ ವಿಷ್ಣು ಅವರನ್ನು ಅವತಾರಪುರುಷನಂತೆ ಚಿತ್ರಿಸಲಾಯಿತು. ಇವೆಲ್ಲವೂ ಒಬ್ಬ ನಟನ ಹೆಸರಿನ ವ್ಯಾಪಾರೀಕರಣವೇ ಹೊರತು, ವ್ಯಕ್ತಿತ್ವದ ಹೊಳಪನ್ನು ಹೆಚ್ಚಿಸುವಂತಹ ಕೆಲಸಗಳಲ್ಲ.

ವಿಷ್ಣುವರ್ಧನ್ ಸಿನಿಮಾಗಳ ನಿಜವಾದ ಮೌಲ್ಯಮಾಪನವೇ ಈವರೆಗೂ ಸರಿಯಾಗಿ ನಡೆದಿಲ್ಲ. 'ಆಪ್ತಮಿತ್ರ', 'ಆಪ್ತರಕ್ಷಕ'ದಂತಹ ಹಾರರ್ ಸಿನಿಮಾಗಳ ಮೂಲಕ ಹಾಗೂ ತಮಿಳಿನಿಂದ ಕಡತಂದ ಗಿರಿಜಾಮೀಸೆಯ ಪಾತ್ರಗಳ ಮೂಲಕ ಅವರನ್ನು ಗುರ್ತಿಸಲಾಗುತ್ತಿದೆ. ಆದರೆ, ಕನ್ನಡದ ಸೊಗಡಿನ ಅನೇಕ ಪಾತ್ರಗಳನ್ನು ಅವರು ಕಳೆಗಟ್ಟಿಸಿದ್ದಾರೆ. ಅಂಥ ಪಾತ್ರಗಳ ಕುರಿತು ಚರ್ಚೆ ನಡೆಯಬೇಕಾಗಿದೆ. 'ನಾಗರಹಾವು', 'ಬೂತಯ್ಯನ ಮಗ ಅಯ್ಯು', 'ಬಂಧನ', 'ಮುತ್ತಿನಹಾರ'ದಂಥ ಚಿತ್ರಗಳ ಬಗ್ಗೆ ಹೆಚ್ಚಿನ ಚರ್ಚೆ ನಡೆಯಬೇಕಾಗಿದೆ.

ಇತ್ತೀಚೆಗೆ ಆಧುನಿಕ ತಂತ್ರಜ್ಞಾನದ ಸ್ಪರ್ಶದೊಂದಿಗೆ ತೆರೆಕಂಡ ಪುಟ್ಟಣ್ಣ ಕಣಗಾಲ್ ನಿರ್ದೇಶನದ 'ನಾಗರಹಾವು' ಚಿತ್ರ ದೊಡ್ಡ ಯಶಸ್ಸು ಕಂಡಿದ್ದು ವಿಷ್ಣು ವರ್ಚಸ್ಸಿಗೆ ಉದಾಹರಣೆಯಂತಿದೆ. ಈ ಯಶಸ್ಸು ವಿಷ್ಣು ಅವರ ಇನ್ನಷ್ಟು ಚಿತ್ರಗಳು ತೆರೆಕಾಣಲಿಕ್ಕೆ ಕಾರಣವಾದರೆ, ಅದು ಕಲಾವಿದನೊಬ್ಬನನ್ನು ನೆನಪಿಸಿಕೊಳ್ಳುವ ನಿಜವಾದ ಉತ್ಸವವಾಗಬಹುದು.

ವಿಷ್ಣುವರ್ಧನ್ ಜೀವನ–ಸಾಧನೆಯ ಬಗ್ಗೆ ಹತ್ತಾರು ಪುಸ್ತಕಗಳು ಮಾರುಕಟ್ಟೆಯಲ್ಲಿವೆ. ಆದರೆ, ಆರಾಧನಾ ಭಾವದಿಂದ ಮುಕ್ತವಾಗಿ ವಿಶ್ಲೇಷಿಸುವ ಸಮರ್ಥ ಕೃತಿಯೊಂದು ಇನ್ನೂ ಬರಬೇಕಿದೆ.

ವಿಷ್ಣು ಅವರ ಸ್ಮಾರಕ ನಿರ್ಮಾಣವಾಗುತ್ತದೋ ಇಲ್ಲವೋ ತಿಳಿಯದು. ಕನ್ನಡದ ವಿಶಿಷ್ಟ ನಟನನ್ನು ಮುಂದಿನ ಪೀಳಿಗೆಗೆ ತಲುಪಿಸುವುದು 'ನಿಜವಾದ ಸ್ಮಾರಕ' ಆಗಬಲ್ಲದು. ಅದು ಆಗುವುದು ಸಿನಿಮಾಗಳ ಪುನರ್ ಅವಲೋಕನದಿಂದ ಹಾಗೂ ನಟ–ಸಾಧಕನಾಗಿ ಅವರನ್ನು ಬೆಲೆಕಟ್ಟಬಲ್ಲ ವಿಮರ್ಶಾತ್ಮಕ ನೋಟಗಳಿಂದ.\ ■